**ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸೇಡಂ.**

ಸಿ.ಸಿ. ನಂಃ 176/2015 ಸಿಡಬ್ಲ್ಯೂ: 9 ಪಿಡಬ್ಲ್ಯೂ: 8

ಪ್ರಮಾಣವಚನ ಬೋಧಿಸಲಾಯಿತು ದಿಃ 06-03-2025

ಹೆಸರು : ದೀಪಕ್

ತಂದೆ ಹೆಸರು : ಶಂಕರ್

ವಯಸ್ಸು : 32 ವರ್ಷ

ಉದ್ಯೋಗ : ಒಕ್ಕಲುತನ

ವಾಸಸ್ಥಳ : ಸೇಡಂ

**:ಮುಖ್ಯ ವಿಚಾರಣೆ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದ:**

ನನಗೆ ಈ ಪ್ರಕರಣದ ಬಗ್ಗೆ ಯಾವುದೇ ರೀತಿಯ ಮಾಹಿತಿ ಇಲ್ಲ. ನಾನು ಯಾವುದೇ ದಾಳಿ ಹಾಗೂ ಪಂಚನಾಮೆಯಲ್ಲಿ ಭಾಗಿಯಾಗಿಲ್ಲ. ಜಪ್ತಿ ಪಂಚನಾಮೆ ಬಗ್ಗೆ ನನಗೆ ಗೊತ್ತಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲಿಗೆ ಅನುಮತಿ ಕೋರಿರುತ್ತಾರೆ, ಅನುಮತಿ ನೀಡಲಾಯಿತು)**

**ಪಾಟೀಸವಾಲುಃ** ಮಾನ್ಯ ಸ.ಸ.ಅ ರವರಿಂದ:

ದಿ.02-07-2014 ರಂದು ಸಾಯಂಕಾಲ 07-00 ಗಂಟೆ ಸುಮಾರಿಗೆ 1 ನೇ ಆರೋಪಿ ಅಕ್ಕಿ, ಗೋಧಿ ಹಾಗೂ ಸಕ್ಕರೆ ಚೀಲಗಳನ್ನು ಲೋಡು ಮಾಡಿ ಗುರುಮಿಟ್ಕಲ್ ಗೆ ಕಳುಹಿಸಲು ಹೇಳಿರುತ್ತಾರೆ ಎಂದರೆ ಸರಿಯಿಲ್ಲ. ಅದೇ ರೀತಿ ಚಾ ಸಾ 10 ರಿಂದ 13 ರವರಿಗೆ ಬರಮಾಡಿಕೊಂಡು ಎಲ್ಲಾ ಚೀಲಗಳನ್ನು ಲಾರಿ ನಂ. ಎ ಪಿ 27 ಡಬ್ಲ್ಯೂ 9637 ನೇದ್ದರಲ್ಲಿ ಲೋಡು ಮಾಡಿ ನಿಂತಾಗ ಚಾಸಾ 1 ರಿಂದ 7 ರವರು ಬಂದು ದಾಳಿ ಮಾಡಿರುತ್ತಾರೆ ಎಂದರೆ ಸರಿಯಿಲ್ಲ. ನಂತರ ಸದರಿ ಯವರು ನನಗೆ ವಿಚಾರಿಸಿದಾಗ ನಾನು 1 ನೇ ಆರೋಪಿತನು ನನಗೆ ಲೋಡು ಮಾಡಿ ಕಳುಹಿಸಲು ಹೇಳಿರುತ್ತಾರೆ ಎಂದರೆ ಸರಿಯಿಲ್ಲ. ನಂತರ ಚಾ ಸಾ 1 ರಿಂದ 7 ರವರು ದಾಸ್ತಾನನ್ನು ಪರಿಶೀಲಿಸಿದಾಗ ಅದರಲ್ಲಿ ವ್ಯತ್ಯಾಸ ಕಂಡು ಬಂದಿರುವುದರಿಂದ 1 ನೇ ಆರೋಪಿತರ ಅಂಗಡಿಯಲ್ಲಿ ಪಂಚನಾಮೆಯನ್ನು ಮಾಡಿ ದಾಸ್ತಾನುಗಳನ್ನು ವಶಕ್ಕೆ ಪಡಿಸಿಕೊಂಡು ಅಲ್ಲಿಂದ ಹೋಗಿರುತ್ತಾರೆ. 1 ನೇ ಆರೋಪಿತನು ನನ್ನ ತಂದೆಯಾಗಿರುವುದರಿಂದ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಿಲ್ಲ. ಸಾಕ್ಷಿಗೆ ಒಂದು

ದಾಖಲಾತಿಯನ್ನು ಓದಿ ಹೇಳಲಾಗಿ ಸಾದರಿ ದಾಖಲಾತಿಯು ಸಾಕ್ಷಿಯ ಹೇಳಿಕೆಯಾಗಿದ್ದು ಸಾಕ್ಷಿಯು ಅದರಲ್ಲಿರುವ ವಿಷಯಗಳನ್ನು ನಿರಾಕರಿಸಿರುವುದರಿಂದ ಅದನ್ನು ನಿ ಪಿ 5 ಎಂದು ಗುರುತಿಸಲಾಯಿತು.

**ಪಾಟೀಸವಾಲು:** ಆರೋಪಿ ಪರ ವಕೀಲರಿಂದ: ವಕೀಲರು ಪಾಟೀಸವಾಲು ಇರುವುದಿಲ್ಲವೆಂದು ತಿಳಿಸಿರುತ್ತಾರೆ.

ಮರುವಿಚಾರಣೆ: ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

**ಓ. ಹೇ. ಕೇ. ಸರಿ. ಇದೆ.**

**ಪ್ರ. ದ. ನ್ಯಾ. ದಂ. ಸೇಡಂ.**